ಬಿದ್ದು ಎರಡು ದಿನಕ್ಕೆ ಫಟ್ಟ. ಹಾಗಂತ ಮೈಮೇಲೆ ಒಂದು ಗಾಯ ಆಗಿರಲಿಲ್ಲವಂತೆ. ಒಂದು ಹನಿ ರಕ್ತ ಬಂದಿರಲಿಲ್ಲವಂತೆ. 'ಒಳಗೊಳಗೇ ತಲೆಗೆ ಪೆಟ್ಟು ಬಿದ್ದಿದ್ದು' ಅನ್ನುವುದು ಹೇಳಿಕೆ ಮಾತು. ಇರಲೂಬಹುದು. ಇಲ್ಲದಿದ್ದರೆ ಕಲ್ಲುಗುಂಡಿನ ಹಾಗಿದ್ದವನು ಸಾಯುವುದು ಅಂದರೇನು?

"ಬೇಜಾರಾಗ್ತಿದೆಯೇನೇ?" ಕೇಳಿದ್ದರು ಮಾಲಕ್ಷ್ಮಿಯ ಅಮ್ಮ.

"ಇಲ್ಲಪ್ಪಾ..." ಚುಟುಕಾಗಿ ಉತ್ತರಿಸಿದ್ದಳು ಮಾಲಕ್ಷ್ಮಿ. ಎಲ್ಲೋ, ಯಾರೋ ಪರಿಚಿತರು ಅಸಹಜವಾಗಿ ಸತ್ತರೆ 'ಅಯ್ಯೋ, ಪಾಪ...' ಅನ್ನುವಷ್ಟಾದರೂ ಸಹಾನುಭೂತಿ ಮನಸ್ಸಿನಲ್ಲಿರುತ್ತದೆ. ಅಗ್ನಿಸಾಕ್ಷಿಯಾಗಿ ಕೈ ಹಿಡಿದವಳಿಂದ ಈ ಮಾತ್ರದ ಅನುಕಂಪಕ್ಕೂ ಭಾಜನನಾಗದೆ ಮಾಲಕ್ಷ್ಮಿಯ ಗಂಡನೆನ್ನಿಸಿಕೊಂಡವ ಈ ಲೋಕಕ್ಕೆ ಶಾಶ್ವತ ವಿದಾಯ ಹೇಳಿದ. ಮಗಳನ್ನು ಬಚ್ಚಲಲ್ಲಿ ಕೂರಿಸಿ, ತೊಟ್ಟ ಬಟ್ಟೆಗಳ ಸಮೇತ ತಲೆಯ ಮೇಲೆ ನೀರು ಹುಯ್ದು, ಮೈಲಿಗೆ ಕಳೆಸಿದರು ಅವಳ ಅಮ್ಮ. ಕಡಿದು ಬೀಳಬಾರದೆಂದು ಪ್ಲಾಸ್ಟಿಕ್ ದಾರದಲ್ಲಿ ಪೋಣಿಸಿ, ನಡುಮಧ್ಯ ತಾಳಿ, ಗುಂಡು ಬರುವಂತೆ ಸುರಿದಿದ್ದ ಕರಿಮಣಿಸರವನ್ನು ಯಾವತ್ತೋ ತೆಗೆದು ಮದುವೆಸೀರೆಯ ಮಡಿಕೆಯ ನಡುವೆ ಇಟ್ಟು ಮರೆತಿದ್ದಳು ಮಾಲಕ್ಷ್ಮಿ. ಕಡಿಯುವುದೇ ಹೌದಾದರೆ ತೊಲಗಟ್ಟಲೆ ಚಿನ್ನದಲ್ಲಿ ಸುತ್ತಿಸಿದ್ದರೂ ಒಂದೇ, ದಾರದಲ್ಲಿ ಸುರಿದಿದ್ದರೂ ಒಂದೇ ಎನ್ನುವಂತಾ ಭಾವವೊಂದು ತಲೆಯ ಮೇಲೆ ನೀರು ಹುಯ್ಯಿಸಿಕೊಳ್ಳುತ್ತಿದ್ದ ಕ್ಷಣದಲ್ಲಿ ಮಾಲಕ್ಷ್ಮಿಯ ಮನದೊಳಗೆ ಮಿಂಚಿದಂತಾಗಿದ್ದು ನಿಜ.

★★★

ಇವೆಲ್ಲಾ ಇಪ್ಪತ್ತಿಪ್ಪತ್ತೈದು ವರ್ಷಗಳ ಹಳೆಯ ಕತೆ. ಅಪ್ಪ, ಅಮ್ಮನಿಗೆ ಹೊರೆಯಾಗಬಾರದೆಂದು ಯಾವತ್ತೋ ಮಾಲಕ್ಷ್ಮಿ ಮೈ ಕೊಡವಿಕೊಂಡು ಮೇಲೆದ್ದಿದ್ದಳು. 'ನಿಂಜೊತೆ ನಾನೂ ಬರ್ತೀನಿ...' ಎಂದು ಅವಳು ಮೊಟ್ಟಮೊದಲು ಹೇಳಿದ ದಿನ, ಹೇಳಿದ ಗಳಿಗೆಯಲ್ಲಿ ಕುಮುಟಿ ಬಿದ್ದಿದ್ದರು ಪದ್ದಯ್ಯ. ಕಣ್ಣುಗಳು ಮಂಜಾಗಿ, ದನಿ ಗದ್ಗದವಾಗಿತ್ತು. 'ನಿಂಗೆ ಒಂತುತ್ತು ಅನ್ನ ಹಾಕೋ ಯೋಗ್ತಿ ದೇವ್ರು ನಂಗೆ ಕೊಟ್ಟಿದಾನೆ' ಎನ್ನುವಷ್ಟಕ್ಕೆ ಕಣ್ಣು ತುಂಬಿದ ನೀರು ಉದುರಿ ಬಿದ್ದಿತ್ತು. ಮಾಲಕ್ಷ್ಮಿ ಅಂಗೈಯಿಂದ ಅಪ್ಪನ ಕೆನ್ನೆ ಒರೆಸಿದ್ದಳು. ಹಾಗೆ ಒರೆಸುತ್ತಾ ಭಾವುಕಳಾಗಿದ್ದಳು. ಆಗಲೇ ಅಪ್ಪನ ಮುಖದಲ್ಲಿ ನೆರಿಗೆ ಬೀಳತೊಡಗಿದೆ. ದೊಡ್ಡ ದೊಡ್ಡ ಅನ್ನದ ಚರಿಗೆ ಎತ್ತಿ ಬಾಗಿದ ಬೆನ್ನು ಸಂಸಾರದ ಭಾರಕ್ಕೆ ಮತ್ತಷ್ಟು ಗೂನಾಗಿದೆ. ಸುಮ್ಮನೆ ಮನೆಯಲ್ಲಿದ್ದುಕೊಂಡು ಹೊತ್ತು ಕೊಲ್ಲುವುದರ ಬದಲು ಅಪ್ಪನ ಜೊತೆ ಸಹಾಯಕ್ಕೆ ಹೋದರೆ ನಾಕು ಕಾಸು ದುಡಿಯಬಹುದು ಎಂದು ಮಾಲಕ್ಷ್ಮಿಯ ಆಂತರ್ಯ. ಅದನ್ನೇ ಅಪ್ಪನ ಹತ್ತಿರ ಹೇಳಿದ್ದಳು,

"ನಿಂಗೆ ಅನ್ನ ಹಾಕೋ ಯೋಗ್ತಿ ಇಲ್ಲ ಅಂತ ಹೇಳ್ತಿರೋದಲ್ಲ ಅಪ್ಪ. ಮನೇಲಿ ಕೂತುಕೂತು ಜಡ್ಡುಗಟ್ಟಿ ಹೋಗಿದೀನಿ. ನಾಕುಕಾಸು ಜಾಸ್ತಿ ಸಿಕ್ಕಿದ್ರೆ ಕೈಂಯಾಗಲ್ಲ ಅಲ್ವಾ?"

ಮಗಳ ಸಪೋರ್ಟಿಗೆ ಅಮ್ಮನೂ ಬಂದಳು. "ಅವಳು ಮಾತ್ರಾ ಅಲ್ಲ, ನಾನೂ ಬರ್ತೀನಿ ನಿಮ್ಜೊತೆ. ಹೆಚ್ಚೋಕೆ, ಅರೆಯೋಕೆ, ತುರಿಯೋಕೆ ನಂಗೂ ಗೊತ್ತುಂಟು..."

ಅಮ್ಮ, ಮಗಳು ಮಾತಾಡಿಕೊಂಡಂತೆ ಪದ್ದಯ್ಯನ ಬೆನ್ನು ಬಿದ್ದರು. ಅಳೆದೂ, ತೂಗೀ ಹೂಂಗುಟ್ಟಿದರು ಪದ್ದಯ್ಯ. ತಾನೇನು ಶಾಶ್ವತ ಅಲ್ಲವಲ್ಲ? ಥಟ್ಟನೆ ಒಂದು ದಿನ ಪೆಟ್ಟಿಗೆ ಕಟ್ಟಬೇಕಾದ ಪ್ರಸಂಗ ಬಂದರೆ ಬದುಕುವ ದಾರಿ ಇವರೂ ಗೊತ್ತು ಮಾಡಿಕೊಂಡಿರಲಿ.